**CC No. 588/2023**
**PW-1**

ದಿನಾಂಕ 28.04.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ 1 ಮತ್ತು 2ನೇ ಆರೋಪಿತರ ಪರ ಶ್ರೀ. ಎಂ.ಆರ್ ವಕೀಲರಿಂದಃ

1 ಮತ್ತು 2ನೇ ಆರೋಪಿತರು ವಿವಾಹವಾಗುವ ಪೂರ್ವದಲ್ಲಿಯೇ ಹತ್ತಿರದ ಸಂಬಂಧಿಕರು ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಕುಟುಂಬದವರು ಹೇಳಿ 1 ಮತ್ತು 2ನೇ ಆರೋಪಿತರು ಸಂಬಂಧಿಕರು ಎಂದು ಗೊತ್ತಾ ಎಂದರೆ ಸಾಕ್ಷಿ ಮದುವೆಯಾದ ನಂತರದಲ್ಲಿ ಗೊತ್ತಾಗಿದೆ ಎಂದು ಹೇಳುತ್ತಾರೆ. 1 ಮತ್ತು 2ನೇ ಆರೋಪಿತರಿಗೆ ನಮ್ಮ ಮನೆಯ ಆರ್ಥಿಕ ವಿಚಾರ ಗೊತ್ತಿರುವ ವಿಚಾರ ಎಂದರೆ ಸರಿ. ನನ್ನ ತಂದೆಯವರು ಎಸ್.ಡಿ.ಎಂ ಐ.ಟಿ.ಐ ಮೆಸ್‌ನ ಬೇಕರಿಯಲ್ಲಿ ತಿನಿಸುಗಳನ್ನು ತಯಾರು ಮಾಡುವ ಕೆಲಸ ಮಾಡುತ್ತಿದ್ದರು. ಅವರಿಗೆ ಅಂದಾಜು ಎಷ್ಟು ಸಂಬಳ ಎಂದರೆ ಸಾಕ್ಷಿ ತಿಂಗಳಿಗೆ ರೂ. 15,000/- ಎಂದು ಹೇಳುತ್ತಾರೆ. ನನ್ನ ತಂದೆ ತಾಯಿಯರಿಗೆ ಮೂರು ಜನ ಮಕ್ಕಳು. ನಾನು ಮತ್ತು ನನ್ನ ಇಬ್ಬರು ಅಣ್ಣಂದಿರು ಅಂದರೆ ಸಂಪತ್ ಮತ್ತು ಸಂದೀಪ್ ಎಂದು. ನನ್ನ ಇಬ್ಬರು ಅಣ್ಣಂದಿರು ಧರ್ಮಸ್ಥಳದ ದೇವಸ್ಥಾನದಲ್ಲಿ ಕ್ಷೌರಿಕ ಕೆಲಸವನ್ನು ಮಾಡುತ್ತಾರೆ. ನನ್ನ ತಾಯಿ ಗೃಹಿಣಿ. ನಿಮ್ಮ ಮತ್ತು ನಿಮ್ಮ ಅಣ್ಣಂದಿರ ವಯಸ್ಸು ಎಷ್ಟು ಎಂದರೆ ಸಾಕ್ಷಿ ನನಗೆ 26 ವರ್ಷ ನನ್ನ ಅಣ್ಣಂದಿರಿಗೆ 29 ಮತ್ತು 30 ವರ್ಷ ಆಗಿರುತ್ತದೆ. ನನ್ನ ತಂದೆಯವರಿಗೆ ಈಗ 50 ವರ್ಷ ವಯಸ್ಸಾಗಿರುತ್ತದೆ.

2. ಮದುವೆಯಾಗುವ ಪೂರ್ವದಲ್ಲಿ ಆರೋಪಿತರ ಕುಟುಂಬದವರು ನಿಮ್ಮ ಮನೆಗೆ ಬಂದಿದ್ದರಾ ಎಂದರೆ ಇಲ್ಲ, ನಮ್ಮ ಸಂಬಂಧಿಕರ ಮನೆಗೆ ಹುಡುಗಿ ನೋಡಲು ಬಂದಿದ್ದರು. ಈ ಪ್ರಕರಣ ಅಲ್ಲದೆ ಆರೋಪಿತರ ವಿರುದ್ಧ Crl. Misc 175/2022 ಹಾಗೂ M.C 64/2024 ರಂತೆ ಪ್ರಕರಣ ದಾಖಲಿಸಿದ್ದೇವೆ ಎಂದರೆ ಹೌದು. M.C 64/2024 ರಲ್ಲಿ ವಿಚ್ಛೇದನಾ ಹಾಗೂ 3 ಕೋಟಿ ಪರಿಹಾರ ಕೇಳಿದ್ದೇನೆ ಎಂದರೆ ಹೌದು. Crl. Misc 175/2022 ರಲ್ಲಿ ದೊಡ್ಡ ಮೊತ್ತದ ಪರಿಹಾರ ಕೇಳಿದ್ದೀರಿ ಎಂದರೆ ಸರಿ. ನಮ್ಮ ಮದುವೆಯ reception ನ್ನು ಎಲ್ಲರನ್ನೂ ಕರೆದು ಹಾಲ್ ನಲ್ಲಿ ಮಾಡಿಲ್ಲ ಎಂದರೆ ಸಾಕ್ಷಿ ಹಾಲ್ ನಲ್ಲಿ ಮಾಡಿರುವುದಿಲ್ಲ ಆದರೆ ಮನೆಯಲ್ಲಿ ಮಾಡಿರುತ್ತೇವೆ ಎಂದು ಹೇಳುತ್ತಾರೆ. ಮದುವೆಗೆ ಅಂದಾಜು ಎಷ್ಟು ಖರ್ಚು ಆಗಿದೆ ಎಂದರೆ ಸಾಕ್ಷಿ ನನ್ನ ಎಂಗೇಜ್ ಮೆಂಟ್ ನ್ನು ಸೇರಿಸಿ

ಸುಮಾರು 17 ಲಕ್ಷ ನನ್ನ ಪ್ರಕಾರ ಖರ್ಚಾಗಿರುತ್ತದೆ. ಮದುವೆಯನ್ನು ಮನೆ ಮಾರಿ ಮಾಡಿರುತ್ತಾರೆ. ಮನೆ ಮಾರಿ ಮದುವೆ ಮಾಡಿಕೊಂಡ ವಿಚಾರ 1 ಮತ್ತು 2ನೇ ಆರೋಪಿತರಿಗೆ ಗೊತ್ತಿತ್ತು. ಮದುವೆ ಮಾತುಕತೆ ಸಮಯದಲ್ಲಿ ವರದಕ್ಷಿಣೆ ವಿಚಾರ ಪ್ರಸ್ತಾಪ ಆಗಿತ್ತಾ ಎಂದರೆ ಸಾಕ್ಷಿ ಹುಡುಗಿ ನೋಡುವಾಗ ಅದರ ಮಾತುಕತೆ ಆಗಿರಲಿಲ್ಲ ಎಂದು ಹೇಳುತ್ತಾರೆ. ಎಂಗೇಜ್‌ಮೆಂಟ್ ಟೈಮ್‌ನಲ್ಲಿ ಆಗಿತ್ತಾ ಎಂದರೆ ಇಲ್ಲ. ಮದುವೆ ಪೂರ್ವದಲ್ಲಿ ಇಂತಿಷ್ಟು ವರದಕ್ಷಿಣೆ ಕೊಡಬೇಕು ಎಂದು ಮಾತುಕತೆಯಾಗಿರಲಿಲ್ಲ.

3. ನಿಮ್ಮ ಪ್ರಕಾರ ವರದಕ್ಷಿಣೆಯನ್ನು ಯಾವಾಗ ಕೇಳಿದ್ದಾರೆ ಎಂದರೆ ಸಾಕ್ಷಿ ಮದುವೆಯಾದ ಒಂದು ತಿಂಗಳ ನಂತರ ಕೇಳಿದ್ದಾರೆ ಎಂದು ಹೇಳುತ್ತಾರೆ. ವರದಕ್ಷಿಣೆ ಕೇಳುವಾಗ ಯಾರು ಇದ್ದರು ಎಂದರೆ ಸಾಕ್ಷಿ ಆರೋಪಿತರ ಮನೆಯಲ್ಲಿ ನಾನು ಮಾತ್ರ ಇದ್ದೆ ಎಂದು ಹೇಳುತ್ತಾರೆ. ಆ ರೀತಿ ಎಷ್ಟು ಬಾರಿ ಕೇಳಿದ್ದಾರೆ ಎಂದರೆ ಸಾಕ್ಷಿ ಜಗಳವಾಗುವಾಗ 4 – 5 ಬಾರಿ ಕೇಳಿದ್ದಾರೆ ಎಂದು ಹೇಳುತ್ತಾರೆ. 4 – 5 ಬಾರಿ ಕೇಳುವಾಗ ನಾನೇ ಇದ್ದೆ, ಬೇರೆ ಯಾರು ಇರಲಿಲ್ಲ. ನನ್ನ ಹತ್ತಿರ ಸ್ವಂತ ಮೊಬೈಲ್ ಫೋನ್ ಇತ್ತು. 4 – 5 ಬಾರಿ ಎಷ್ಟು ತಿಂಗಳ ಅಂತರದಲ್ಲಿ ಕೇಳಿದ್ದಾರೆ ಎಂದರೆ ಸಾಕ್ಷಿ 15 ದಿನಗಳಲ್ಲಿ ಕೇಳಿದ್ದಾರೆ ಎಂದು ಹೇಳುತ್ತಾರೆ. ವರದಕ್ಷಿಣೆ ಕೇಳುವುದನ್ನು ರೆಕಾರ್ಡ್ ಮಾಡಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಮೊಬೈಲ್ ಒಂದು ಕಡೆ ಇತ್ತು, ನಾನು ಒಂದು ಕಡೆ ಇರುತ್ತಿದ್ದೆ, ಆದಕಾರಣ ಮಾಡಿಲ್ಲ ಎಂದು ಹೇಳುತ್ತಾರೆ. ವರದಕ್ಷಿಣೆಯನ್ನು ಆ ಸಮಯದಲ್ಲಿ ನನ್ನ ಮುಂದೆ ಮಾತ್ರ ಕೇಳಿದ್ದಾರೆ. ಅಲ್ಲದೆ ಜಗಳವನ್ನು ಇತ್ಯರ್ಥ ಮಾಡಲು ಬಂದ ಸುರೇಶ್ ಕಡಂದಲೆ, ಸದಾಶಿವ ಸಕ್ಲೇಶ್‌ಪುರ ಹಾಗೂ ನನ್ನ ತಂದೆ ತಾಯಿ ಹಾಗೂ ಮಾವ ಪ್ರಶಾಂತ ಭಂಡಾರಿ, ನನ್ನ ಅಮ್ಮನ ಅತ್ತೆ ಮಾವ ತೇಜ ಭಂಡಾರಿ, ನಾರಾಯಣ ಭಂಡಾರಿ ರವರ ಸಮಕ್ಷಮದಲ್ಲಿ ಕೇಳಿದ್ದಾರೆ. ಅಲ್ಲಿದ್ದವರಲ್ಲಿ ಮೊಬೈಲ್ ಫೋನ್ ಇತ್ತು ಎಂದರೆ ಹೌದು. ಆ ದಿನ ಅದನ್ನು ರೆಕಾರ್ಡ್ ಮಾಡಿಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸರಿ. ಅಲ್ಲದೆ ಆ ದಿನ ನನ್ನ ಜೊತೆ ಇತರರಿಗೂ ಸಹ ರೆಕಾರ್ಡ್ ಮಾಡಿಕೊಳ್ಳಲು ತೊಂದರೆ ಇರಲಿಲ್ಲ.

4. ನಾನು B.E in computer science ಮಾಡಿದ್ದೇನೆ. 1ನೇ ಆರೋಪಿ B.Sc ಮಾಡಿದ್ದಾರೆ. ನನ್ನ ವಿದ್ಯಾರ್ಹತೆಯನ್ನು ನೋಡಿದಾಗ 1ನೇ ಆರೋಪಿಗಿಂತ ನನ್ನ ವಿದ್ಯಾರ್ಹತೆ ಹೆಚ್ಚಾಗಿದೆ ಎಂದರೆ ಹೌದು. ಹಾಗಿದ್ದಾಗ ಯಾವ ಕಾರಣಕ್ಕೆ ಮದುವೆಯಾಗಲು ಒಪ್ಪಿದ್ದೀರಿ ಎಂದರೆ ಸಾಕ್ಷಿ ನನ್ನ ತಂದೆ ತಾಯಿ ಚಾಯ್ಸ್ ನನ್ನ ಹಿಡಿಸಿತ್ತು ಎಂದು ಹೇಳುತ್ತಾರೆ. ನನ್ನ ಕ್ರಿಮಿನಲ್ ಮಿಸ್ ಪಿಟಿಷನ್ ಹಾಗೂ ಎಂ.ಸಿ ಪಿಟಿಷನ್ ನಲ್ಲಿ 1ನೇ ಆರೋಪಿಗೆ ಎರಡು ಮನೆ, ಕೋಟಿಗಟ್ಟಲೆ ಸಂಪಾದನೆ ಇದೆ ಎಂದು

ಹೇಳಿದ್ದೇನೆ ಎಂದರೆ ಸರಿ. ಸುರೇಶ್ ಭಂಡಾರಿ ಹಾಗೂ ಸದಾಶಿವ ಸರ್ಕ್ಲೇಶ್‌ಪುರ ರವರ ಮಾತುಕತೆ ಮಾಡುವಾಗ ನೀವು ನಿಮ್ಮ ಉಡುಪುಗಳನ್ನು ತೆಗೆದುಕೊಂಡು ಹೋಗಿದ್ದೀರಿ ಎಂದರೆ ಸಾಕ್ಷಿ ನನ್ನ ಎಲ್ಲಾ ಉಡುಪುಗಳು ಹಾಗೂ ವಸ್ತುಗಳು ಆರೋಪಿತರ ಮನೆಯಲ್ಲಿ ಇದ್ದವು, ಆ ದಿನ ಅವರೇ ಬ್ಯಾಗನ್ನು ತೆಗೆದುಕೊಂಡು ಬಂದಿದ್ದರು ಎಂದು ಹೇಳುತ್ತಾರೆ. ನಿಮ್ಮ ಎಲ್ಲಾ ಡ್ರೆಸ್ ಗಳನ್ನು ತಂದಿದ್ದರಾ ಎಂದರೆ ಇಲ್ಲ, ಒಂದು ಚಿಕ್ಕ ಬ್ಯಾಗಿನಲ್ಲಿದ್ದ ಡ್ರೆಸ್ ಗಳನ್ನು ತಂದಿದ್ದಾರೆ ಎಂದು ಹೇಳುತ್ತಾರೆ. ಆ ದಿನ ನಾನು ನನ್ನ ಬಂಗಾರವನ್ನು ಕೇಳಿದ್ದೇನೆ, ಆದರೆ ಅವರು ಕೊಟ್ಟಿರುವುದಿಲ್ಲ. ಯಾಕೆ ಎಂದರೆ ಸಾಕ್ಷಿ ನಮ್ಮ ಹತ್ತಿರ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ವಿಚಾರವನ್ನು ಪೊಲೀಸರಿಗೆ ಹೇಳಿದ್ದೀರಾ ಎಂದರೆ ಹೌದು. ಸುರೇಶ್ ರವರ ಮುಖೇನ ಚಿನ್ನವನ್ನು ತೆಗೆದುಕೊಂಡು ಬನ್ನಿ ಎಂದು ಒತ್ತಾಯ ಮಾಡಿದ್ದೀರಾ ಎಂದರೆ ಸಾಕ್ಷಿ ನಾವು ಸಹ ಅವರಿಗೆ ಹೇಳಿದ್ದೆವು, ಅವರು ಕೇಳಿದ್ದಾಗ ನಮ್ಮಲ್ಲಿ ಇಲ್ಲ ಎಂದು ತಿಳಿಸಿರುತ್ತಾರೆ ಎಂದು ಹೇಳುತ್ತಾರೆ. ಏನೆಲ್ಲಾ ಚಿನ್ನಗಳು ಇತ್ತು ಎಂದರೆ ಒಂದು ನೆಕ್ಲೇಸ್, ನಾಲ್ಕು ಚಿನ್ನದ ಬಳೆ, ನಾಲ್ಕು ಕಿವಿ ಓಲೆ ಹಾಗೂ ಒಂದು ಲಾಂಗ್ ಚೇನ್ ಇತ್ತು.

5. ದಿಃ 3.4.2022 ರಂದು ನಾನು ಬೆಳಿಗ್ಗೆ 11 ಗಂಟೆಗೆ ಮುಂಬೈನಿಂದ ಹೊರಟು ಇಲ್ಲಿಗೆ ಮಧ್ಯಾಹ್ನ 12 ಗಂಟೆಯಷ್ಟರಲ್ಲಿ ಬಂದಿರುತ್ತೇನೆ. ನಾನು Flight ನಲ್ಲಿ ಬಂದಿದ್ದೇನೆ ಎಂದರೆ ಹೌದು. ನನ್ನನ್ನು ಏರ್ ಪೋರ್ಟ್ ಗೆ 1ನೇ ಆರೋಪಿ ಬಿಟ್ಟಿದ್ದಾರೆ ಎಂದರೆ ಹೌದು, ಏಕೆಂದರೆ ನನಗೆ ಮುಂಬೈ ಗೊತ್ತಿರಲಿಲ್ಲ. Flight ticket ನ್ನು ಸಹ ಅವರೇ ಮಾಡಿಸಿರುತ್ತಾರೆ. ನನ್ನ ತಾಯಿಯ ಹುಟ್ಟಿದ ದಿನ ಏಪ್ರಿಲ್ 11 ಆಗಿರುತ್ತದೆ. ನನ್ನ ಮಾವನ ಮಕ್ಕಳ ಹುಟ್ಟಿದ ದಿನ ಮೇ ತಿಂಗಳ 12 ಮತ್ತು 13 ಆಗಿರುತ್ತದೆ. ನೀವು ಬಂದಾಗ ನಿಮ್ಮ ಹತ್ತಿರದ ಸಂಬಂಧಿಕರ ಮದುವೆ ಕಾರ್ಯಕ್ರಮದಲ್ಲಿ ಇತ್ತಾ ಎಂದರೆ ನನಗೆ ಗೊತ್ತಿಲ್ಲ. 1ನೇ ಆರೋಪಿಯ ಹತ್ತಿರ ನೀವು ತಾಯಿಯವರ ಹುಟ್ಟಿದ ಹಬ್ಬಕ್ಕೆ ಹಾಗೂ ಮಾವನ ಮಕ್ಕಳ ಹುಟ್ಟಿದ ಹಬ್ಬಕ್ಕೆ ಹೋಗಬೇಕೆಂದು ಕೇಳಿದ್ದೀರಿ ಎಂದರೆ ಇಲ್ಲ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಲಂಡನ್ ಗೆ ಹೋಗುವಾಗ ಯೋಜನೆ ಹಾಕಿದ್ದೆ ಎಂದರೆ ಹೌದು. ಆ ವಿಚಾರವನ್ನು 1ನೇ ಆರೋಪಿಗೆ ಹೇಳಿ ಸಹಕರಿಸಬೇಕೆಂದು ಕೇಳಿದ್ದೀರಾ ಎಂದರೆ ಇಲ್ಲ. ಪ್ರಾರಂಭದಲ್ಲಿ ಆರೋಪಿತರ ಮನೆಗೆ ಹೋದಾಗ ಒಂದು reception ನ್ನು ಮಾಡಿದ್ದರು ಎಂದರೆ ಹೌದು, ಅದು ದಿಃ 13.4.2022 ರಲ್ಲಿ ಆಗಿತ್ತು ಎಂದರೆ ನನಗೆ ನೆನಪಿಲ್ಲ. ಆ reception ನಲ್ಲಿ ಆರೋಪಿತರ ಕುಟುಂಬದವರು ಮಾತ್ರ ಇದ್ದರು ಎಂದರೆ ಸಾಕ್ಷಿ ಅದು ಒಂದು ಹೊಟೇಲ್ ನಲ್ಲಿ ನಡೆದಿತ್ತು ಎಂದು ಹೇಳುತ್ತಾರೆ. ಗಿಫ್ಟ್‌ನ್ನು ಕೊಟ್ಟ ನಂತರ ಕೊಟ್ಟವರಿಗೆ ಒಂದು thanks ನ್ನು ಹೇಳಿದ್ದೀರಿ ಎಂದರೆ ಸಾಕ್ಷಿ 2ನೇ ಆರೋಪಿ ಹೇಳಿದ್ದರು ಆದಕಾರಣ

ಹೇಳಿದ್ದೇನೆ ಎಂದು ಹೇಳುತ್ತಾರೆ. ಸಾಕ್ಷಿಗೆ screenshot ದಾಖಲೆಗಳನ್ನು ತೋರಿಸಿ ಸಾಕ್ಷಿ ಮೆಸೇಜ್ ಹಾಗೂ ಫೋಟೋಗಳನ್ನು ನೋಡಿ ಹೌದು ಎಂದು ಒಪ್ಪಿದ್ದು, screenshot ಜೊತೆಯಲ್ಲಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63(4)(ಸಿ) ನ್ನು ಹಾಜರುಪಡಿಸಿರುವುದಿಲ್ಲ, ಆರೋಪಿರ ಪರ ವಕೀಲರು ಯಾವುದಾದರೂ ಫೋಟೋ ಹಾಗೂ ದಾಖಲೆಗಳನ್ನು ಒಪ್ಪಿದ ನಂತರ ಅವುಗಳನ್ನು ನಿಶಾನೆಯಾಗಿ ಗುರುತಿಸಬೇಕೆಂದು ತಿಳಿಸಿದ್ದು, ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63(4)(ಸಿ) ರಂತೆ ಯಾವುದಾದರೂ screenshot ಅಥವಾ ಇತರೆ ಕಂಪ್ಯೂಟರ್ ನಿಂದ ಪ್ರಿಂಟ್ ತೆಗೆದ ದಾಖಲೆಗಳ ಜೊತೆಯಲ್ಲಿ 63(4)(ಸಿ) ಪ್ರಮಾಣ ಪತ್ರ ಹಾಜರುಪಡಿಸುವುದು ಕಡ್ಡಾಯವಾಗಿದ್ದು, ಪ್ರಮಾಣ ಪತ್ರವನ್ನು ಹಾಜರುಪಡಿಸದ ಕಾರಣ ಸದರಿ ದಾಖಲೆಗಳನ್ನು ಗುರುತಿಸಿರುವುದಿಲ್ಲ ಹಾಗೂ ಆರೋಪಿ ಪರ ವಕೀಲರ ತಕರಾರನ್ನು ತಳ್ಳಿಹಾಕಲಾಗಿರುತ್ತದೆ. ಆರೋಪಿ ಪರ ವಕೀಲರು ಗುರುತಿಸುವ ಸಲುವಾಗಿ ಸದರಿ ದಾಖಲೆಗಳನ್ನು ಮಾರ್ಕ್ ಮಾಡಬೇಕೆಂದು ಕೋರಿಕೊಂಡಿದ್ದು, ಸದರಿ ದಾಖಲೆಗಳನ್ನು ಗುರುತಿಸುವ (for the purpose of identification) ಸಲುವಾಗಿ ಅವುಗಳನ್ನು ಬಿ1 ರಿಂದ 23 ಎಂದು ಗುರುತಿಸಲಾಯಿತು. ನೀವು ಮಾಡಿರುವ ಮೆಸೇಜ್‌ಗಳು ಈಗಲೂ ಸಹ ನಿಮ್ಮ ಮೊಬೈಲ್ ನಲ್ಲಿ ಇದೆ ಎಂದರೆ ಸಾಕ್ಷಿ ಕೆಲವೊಂದು ಮೆಸೇಜ್‌ಗಳು ಈಗಲೂ ಸಹ ಇವೆ ಎಂದು ಹೇಳುತ್ತಾರೆ.

6. ನಿಮಗೆ ಹಲ್ಲೆ ಮಾಡಿದ್ದಾರೆ ಎಂದು ತಿಳಿಸಿದ್ದು, ಆಗ ಯಾರೆಲ್ಲಾ ಇದ್ದರು ಎಂದರೆ ಸಾಕ್ಷಿ 1 ಮತ್ತು 2ನೇ ಆರೋಪಿತರು ಮಾತ್ರ ಇದ್ದರು ಎಂದು ಹೇಳುತ್ತಾರೆ. ಹಲ್ಲೆ ಮಾಡಿದಾಗ ಬೊಬ್ಬೆ ಹಾಕಿದ್ದೀರಾ ಎಂದರೆ ಹೌದು. ಅಕ್ಕಪಕ್ಕದಲ್ಲಿ ಕೇಳಿಸಿದೆಯಾ ಎಂದರೆ ಇಲ್ಲ. ಹಲ್ಲೆ ಮಾಡಿದಾಗ ಯಾವುದಾದರೂ ಗುರುತು ಆಗಿದೆಯಾ ಎಂದರೆ ಇಲ್ಲ, ನೋವು ಮಾತ್ರ ಆಗಿದೆ. ಹೊಡೆದಾಗ ಯಾವುದಾದರೂ ಗುರುತು ಆಗಿತ್ತಾ ಎಂದರೆ ಇಲ್ಲ, ತುಂಬಾ ನೋವಾಗಿತ್ತು. ಹಲ್ಲೆ ಆಗುವಾಗ ವಾಯ್ಸ್ ಅಥವಾ ವಿಡಿಯೋ ರೆಕಾರ್ಡ್ ಮಾಡಿದ್ದೀರಾ ಎಂದರೆ ಸಾಕ್ಷಿ ಆ ಸಮಯದಲ್ಲಿ ಮಾಡಲು ಆಗಿರುವುದಿಲ್ಲ ಏಕೆಂದರೆ ಅವರು ನನ್ನ ಕೂದಲವನ್ನು ಸಹ ಹಿಡಿದಿದ್ದರು ಎಂದು ಹೇಳುತ್ತಾರೆ. ಪೊಲೀಸ್ ಠಾಣೆಗೆ ದೂರು ಕೊಡಲು ಯಾರೆಲ್ಲಾ ಹೋಗಿದ್ದೀರಿ ಎಂದರೆ ಸಾಕ್ಷಿ ನಾನು ನನ್ನ ತಂದೆ ತಾಯಿ, ನನ್ನ ಮಾವ, ನನ್ನ ಅಣ್ಣಂದಿರು ಹೋಗಿದ್ದೆವು ಎಂದು ಹೇಳುತ್ತಾರೆ. ಪೊಲೀಸ್ ಠಾಣೆಗೆ ಹೋಗಿ ನಂತರ ನಾವು ವಕೀಲರ ಕಚೇರಿಗೆ ಹೋಗಿರುತ್ತೇವೆ. ದೂರನ್ನು ಹೇಗೆ ಬರೆಯಬೇಕು ಎಂದು ಯಾರು ಹೇಳಿದ್ದಾರೆ ಎಂದರೆ ಸಾಕ್ಷಿ ಪೊಲೀಸ್ ಠಾಣೆಗೆ ಹೋದಾಗ ದೂರು ಕೊಡಬೇಕೆಂದು ಹೇಳಿದ್ದರು

ಆನಂತರ ವಕೀಲರ ಕಚೇರಿಗೆ ಹೋಗಿ ನನಗೆ ಆದ ತೊಂದರೆಯನ್ನು ಹೇಳಿದಾಗ ಅವರು ಒಂದು ಫಾರ್ಮ್ ನ್ನು ರೆಡಿ ಮಾಡಿಕೊಟ್ಟಿರುತ್ತಾರೆ. ಅದನ್ನು ನಾನು ಪೊಲೀಸ್ ಠಾಣೆಗೆ ಬಂದು ನೀಡಿದ್ದೇನೆ ಎಂದು ಹೇಳುತ್ತಾರೆ. ನೀವು ಬೆಳ್ತಂಗಡಿಗೆ ಬಂದ ದಿನವೇ ಕಂಪ್ಲೆಂಟ್ ನ್ನು ಕೊಟ್ಟಿದ್ದೀರಾ ಎಂದರೆ ಇಲ್ಲ. ಏಕೆಂದರೆ ನನ್ನ ತಂದೆ ತಾಯಿ ಈಗಲೇ ದೂರು ಕೊಡುವುದು ಬೇಡ, ಸರಿ ಮಾಡುವಾ ಎಂದು ಹೇಳಿದ್ದರು ಆದಕಾರಣ ಕೊಟ್ಟಿಲ್ಲ.

7. ನಿಮ್ಮ ಮತ್ತು 1ನೇ ಆರೋಪಿಯ ನಡುವೆಯಾದ ಗಲಾಟೆ, ಬೊಬ್ಬೆ ಅಕ್ಕಪಕ್ಕದವರಿಗೆ ಕೇಳಿದೆಯಾ ಎಂದರೆ ಇಲ್ಲ, ಕೇಳುವುದಿಲ್ಲ. ನೀವು ಮದುವೆಯಾಗಿ ಸಾಂಸಾರಿಕ ಜೀವನ ಪ್ರಾರಂಭ ಮಾಡಲು ಹೋದ ನಂತರ 1ನೇ ಆರೋಪಿ ಬಾಡಿಗೆ ಮನೆಯಲ್ಲಿ ಇದ್ದರು ಎಂದರೆ ಸಾಕ್ಷಿ ಮೊದಲು ಗೊತ್ತಿರಲಿಲ್ಲ, ಬಂದ ನಂತರದಲ್ಲಿ ಗೊತ್ತಾಗಿದೆ ಎಂದು ಹೇಳುತ್ತಾರೆ. ದೂರು ನೀಡುವಾಗ ಮದುವೆಯಾಗಿ ಮೊದಲು ಹೋದ ಮನೆಯ ವಿಳಾಸವನ್ನು ಕೊಟ್ಟಿದ್ದೀರಿ ಎಂದರೆ ಇಲ್ಲ, 1ನೇ ಆರೋಪಿಯ ಆಧಾರ್ ಕಾರ್ಡಿನಲ್ಲಿದ್ದ ವಿಳಾಸವನ್ನು ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಬೆಳ್ತಂಗಡಿ ಪೊಲೀಸರು ಮಹಜರ್ ಮಾಡಲು ಮುಂಬೈಗೆ ಹೋದಾಗ ಬೇಕಾದ ಸಾಕ್ಷಿದಾರರನ್ನು ಬೆಳ್ತಂಗಡಿಯಿಂದಲೇ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಹೌದು. ನೀವು ಸಹ ಹೋಗಿದ್ದಿರಿ ಎಂದರೆ ಹೌದು. ಮತ್ತೆ ಯಾರಿದ್ದರು ಎಂದರೆ ನನ್ನ ಮಾವ ಪ್ರಶಾಂತ್ ಭಂಡಾರಿ ರವರು ಇದ್ದರು. 604 ಮನೆ ಬೀಗ ಹಾಕಿದ್ದರಿಂದ ಒಳಗೆ ಹೋಗಿ ಮಹಜರ್ ಮಾಡಲು ಪೊಲೀಸರಿಗೆ ಆಗಿಲ್ಲ ಎಂದರೆ ಹೌದು.

8. 1ನೇ ಆರೋಪಿಗೆ ಬೇರೆಯವರ ಅನೈತಿಕ ಸಂಬಂಧ ಇದ್ದ ಬಗ್ಗೆ ನೀವು ತಿಳಿಸಿದ್ದು ಈ ಬಗ್ಗೆ ನಿಮ್ಮ ಹತ್ತಿರ ದಾಖಲೆ ಇದೆಯಾ ಎಂದರೆ ಹೌದು. ಅದನ್ನು ಪೊಲೀಸರಿಗೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಪೊಲೀಸರು ಕೋರ್ಟಿನಲ್ಲಿ ಕೇಳುವಾಗ ಕೊಡಬೇಕು ಎಂದು ಹೇಳಿದ್ದರು ಅದಕ್ಕೆ ನಾನು ಆಯಿತು ಎಂದು ಹೇಳಿರುತ್ತೇನೆ. ಮದುವೆ ಖರ್ಚನ್ನು ಎರಡು ಕುಟುಂಬದವರು ಸಮನಾಗಿ ಖರ್ಚು ಮಾಡಿದ್ದೇವೆ ಎಂದರೆ ಹೌದು. ಮದುವೆ ಸಮಯದಲ್ಲಿ ಉಡುಗೊರೆ ಕೊಡುವ ಯಾವುದೇ ಪದ್ಧತಿ ಇರಲಿಲ್ಲ, ಕೇವಲ ಆಶೀರ್ವಾದ ಮಾತ್ರ ಇತ್ತು. ಮದುವೆಯಾಗುವಾಗ ನೀವು ಉದ್ಯೋಗದಲ್ಲಿ ಇದ್ದಿರಾ ಎಂದರೆ ಇಲ್ಲ. ಅದಕ್ಕೂ ಪೂರ್ವದಲ್ಲಿ ಇದ್ದಿರಾ ಎಂದರೆ ಇಲ್ಲ. ಈಗ ಕೆಲಸಕ್ಕೆ ಸೇರಿದ್ದೀರಾ ಎಂದರೆ ಹೌದು. ಯಾವುದರಲ್ಲಿ ಎಂದರೆ REZOLVIA SOFTWARE ENGINEER TRAINING ನಲ್ಲಿ ಕೆಲಸ ಮಾಡುತ್ತಿದ್ದೇನೆ. ಅದರಲ್ಲಿ ನಾನು ತರಬೇತಿದಾರರಾಗಿ ಕೆಲಸ ಮಾಡುತ್ತಿದ್ದೇನೆ, ಅದು

ಮಂಗಳೂರಿನಲ್ಲಿ ಇರುತ್ತದೆ. ನಿಮ್ಮ ಸಂಬಳ ಎಷ್ಟು ಎಂದರೆ ಸಾಕ್ಷಿ ತಿಂಗಳಿಗೆ ರೂ. 15,000/- ಎಂದು ಹೇಳುತ್ತಾರೆ. ನನ್ನ ಹೆಸರಿನಲ್ಲಿ ಎರಡು ಬ್ಯಾಂಕ್ ಖಾತೆಗಳು ಇರುತ್ತವೆ. ಎಸ್.ಬಿ.ಐ, ಉಜಿರೆ ಬ್ರಾಂಚ್ ಮತ್ತು ಕೆನರಾ ಬ್ಯಾಂಕ್, ವೇಣೂರು ಬ್ರಾಂಚ್‌ನಲ್ಲಿ ಖಾತೆಗಳು ಇರುತ್ತವೆ. ಎರಡು ಖಾತೆಗಳನ್ನು ಮದುವೆಯಾಗುವ ಪೂರ್ವದಲ್ಲಿ ಹೊಂದಿದ್ದೀರಿ ಎಂದರೆ ಸಾಕ್ಷಿ ಕೆನರಾ ಬ್ಯಾಂಕ್ ವೇಣೂರು ಬ್ರಾಂಚ್ ಖಾತೆ ಮದುವೆಗೆ ಪೂರ್ವದಲ್ಲಿ ಇತ್ತು, ಎಸ್.ಬಿ.ಐ ಖಾತೆ ಮದುವೆಯಾದ ನಂತರ ತೆರೆದಿರುತ್ತೇವೆ. ಮದುವೆಯಾದ ಎಷ್ಟು ಸಮಯದ ನಂತರ ಎಸ್.ಬಿ.ಐ ಖಾತೆಯನ್ನು ತೆರೆದಿದ್ದೀರಿ ಎಂದರೆ ಸಾಕ್ಷಿ ನಾನು ಏಪ್ರಿಲ್ ತಿಂಗಳಲ್ಲಿ ಆರೋಪಿತರ ಮನೆಯಿಂದ ಬಂದ ನಂತರದಲ್ಲಿ ತೆರೆದಿರುತ್ತೇನೆ ಎಂದು ಹೇಳುತ್ತಾರೆ. ನೀವು ಆಧಾಯ ತೆರಿಗೆಯನ್ನು ಪಾವತಿ ಮಾಡುತ್ತೀರಾ ಎಂದರೆ ಇಲ್ಲ. ಇಲ್ಲಿಯವರೆಗೂ ಪಾವತಿ ಮಾಡಿರುವುದಿಲ್ಲ. ಮದುವೆಯಾದ ದಿನದಿಂದ ಇಲ್ಲಿಯವರೆಗೆ ಎರಡು ಪಾಸ್‌ಬುಕ್‌ಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಲು ಸಿದ್ಧರಿದ್ದೀರಾ ಎಂದರೆ ಹೌದು.

9. ಮದುವೆಯಾದ ನಂತರ 1ನೇ ಆರೋಪಿ ಫೋನ್ ಪೇ ಮೂಲಕ ನನಗೆ ಹಣವನ್ನು ಕಳುಹಿಸಿಕೊಟ್ಟಿದ್ದಾರೆ ಎಂದರೆ ಹೌದು. ನಗದು ರೂಪದಲ್ಲಿ ಹಣವನ್ನು ಕೊಟ್ಟಿದ್ದಾರೆ ಎಂದರೆ ಇಲ್ಲ. ಮದುವೆಯಾದ ದಿನದಿಂದ ವಾಪಾಸು ಬರುವವರೆಗೂ 1ನೇ ಆರೋಪಿ ಫೋನ್ ಪೇ ಮೂಲಕ ಸುಮಾರು ರೂ. 70,000/- ಗಳಷ್ಟು ಕೊಟ್ಟಿದ್ದಾರೆ ಎಂದರೆ ಹೌದು, ಅದು ಯಾವ ಹಣ ಎಂದರೆ ನನ್ನಲ್ಲಿದ್ದ ನಗದು ಹಣವನ್ನು 1ನೇ ಆರೋಪಿಗೆ ಕೊಡುತ್ತಿದ್ದೆ, ಅವರು ನನಗೆ ಫೋನ್ ಪೇ ಮೂಲಕ ಕಳುಹಿಸಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಿಮಗೆ ಆ ಹಣ ಎಲ್ಲಿಂದ ಬಂದಿದೆ ಎಂದರೆ ಸಾಕ್ಷಿ ನಾನು ಮದುವೆಯಾಗಿ ಬರುವಾಗ ನನ್ನ ತಂದೆ ತಾಯಿ ನನಗೆ ರೂ. 30,000/- ಹಣವನ್ನು ಕೊಟ್ಟಿದ್ದರು ಎಂದು ಹೇಳುತ್ತಾರೆ. ನಂತರದಲ್ಲಿ ನನ್ನ ತಂದೆ ತಾಯಿ ನನ್ನನ್ನು ಉಜಿರೆಗೆ ಕರೆದುಕೊಂಡು ಬಂದ ನಂತರ ಖರ್ಚಿಗೆ ಹಣ ಬೇಕು ಎಂದು ಕೇಳಿದ್ದೆ, ಆಗ ನನ್ನ ತಂದೆ ತಾಯಿ, ಮಾವ, ಅಣ್ಣ ಎಲ್ಲರೂ ಒಟ್ಟಿಗೆ ಸೇರಿಸಿ ರೂ. 30,000/- ಕೊಟ್ಟಿದ್ದರು ಎಂದು ಹೇಳುತ್ತಾರೆ. ರೂ. 30,000/- ನಗದು ಹಣವನ್ನು ಎಲ್ಲರೂ ಯಾವ ಬ್ಯಾಂಕಿನಿಂದ ತೆಗೆದು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅವರ ಕೈಯಲ್ಲಿದ್ದ ಹಣವನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಿಮಗೆ ಏನು ಖರ್ಚು ಇತ್ತು ಎಂದರೆ ಸಾಕ್ಷಿ ಎಜುಕೇಶನ್ ಲೋನ್ ಪಾವತಿ ಮಾಡಲು ಇತ್ತು, ಅಲ್ಲದೆ ನನ್ನ ಇತರೆ ಖರ್ಚಿಗೂ ಸಹ ಅವರು ಹಣ ಕೊಡುತ್ತಿರಲಿಲ್ಲ ಎಂದು ಹೇಳುತ್ತಾರೆ. ಎಜುಕೇಶನ್ ಲೋನ್ ನ್ನು ಎಷ್ಟು ಎಲ್ಲಿಂದ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಕೆನರಾ ಬ್ಯಾಂಕಿನಲ್ಲಿ 4 ಲಕ್ಷ ಸಾಲ ಪಡೆದಿದ್ದೆ ಎಂದು ಹೇಳುತ್ತಾರೆ. ಎಷ್ಟು ಇ.ಎಂ.ಐ ಎಂದರೆ ಸಾಕ್ಷಿ ರೂ.

6,000/- ಎಂದು ಹೇಳುತ್ತಾರೆ. ಆ ಸಮಯದಲ್ಲಿ ಸಾಲವನ್ನು ಯಾವ ರೀತಿ ಪಾವತಿ ಮಾಡಿದ್ದೀರಿ ಎಂದರೆ ಸಾಕ್ಷಿ ನಾನು ಆನ್‌ಲೈನ್ ಮೂಲಕ ಪಾವತಿ ಮಾಡಿದ್ದೇನೆ ಎಂದು ಹೇಳುತ್ತಾರೆ. ನಿಮಗೆ ಬೇರೆ ಏನು ಖರ್ಚು ಇತ್ತು ಎಂದರೆ ಸಾಕ್ಷಿ ಏನಾದರೂ ತಿನ್ನಲು, ಬಟ್ಟೆಗೆ, ಔಷಧಿಗಳ ಖರ್ಚು ಇತ್ತು ಎಂದು ಹೇಳುತ್ತಾರೆ. ಬಾಂಬೆಯಲ್ಲಿ ಬಟ್ಟೆಯನ್ನು ಖರೀದಿ ಮಾಡಿದ್ದೀರಾ ಎಂದರೆ ಇಲ್ಲ. ಖರೀದಿ ಮಾಡಲು ಬಿಟ್ಟಿರುವುದಿಲ್ಲ. ಆರೋಪಿತರು ಹಣ ಕೊಟ್ಟಿರುವುದಕ್ಕೆ ಸಾಕ್ಷ್ಯ ಇದೆ ಎಂದು ಗೊತ್ತಾಗಿ ಅದರಿಂದ ತಪ್ಪಿಸಿಕೊಳ್ಳಲು ನನಗೆ ಮನೆಯಿಂದ ರೂ. 60,000/- ಹಣ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯಾಗಿ ಹೋದ ಸ್ವಲ್ಪ ದಿನದಲ್ಲಿ ನನಗೆ ಹಲ್ಲೆ ಮಾಡಿರುತ್ತಾರೆ, 1ನೇ ಆರೋಪಿಗೆ ಬೇರೆಯವರ ಜೊತೆ ಅಕ್ರಮ ಸಂಬಂಧ ಅಲ್ಲದೆ ವರದಕ್ಷಿಣೆ ಹಣವನ್ನು ಕೇಳಿದ್ದರು ಎಂದು ಕಟ್ಟುಕತೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯು.ಕೆ ಗೆ ಹೋಗಲು ಹಣ ಕೊಡುತ್ತೇನೆ ಎಂದು 1ನೇ ಆರೋಪಿ ಹೇಳಿದ್ದರಾ ಎಂದರೆ ಇಲ್ಲ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ನನಗೆ ಸಹಾಯ ಮಾಡಿ ಕೇಳಿದ್ದಿರಾ ಎಂದರೆ ಇಲ್ಲ. ಆರೋಪಿತರ ಹತ್ತಿರ ಲಂಡನ್‌ಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಹೋಗಲು ಒಂದು ಕೋಟಿ ಚಿಲ್ಲರೆ ಹಣ ಕೇಳಿದ್ದೆ ಎಂದರೆ ಸರಿಯಲ್ಲ. ಈ ಮದುವೆ ಮುರಿದು ಬೀಳಲು ನೀವೇ ಕಾರಣ ಎಂದರೆ ಇಲ್ಲ. ನಿಮ್ಮ ಹೆಚ್ಚಿನ ವಿದ್ಯಾಭ್ಯಾಸದ ಆಸೆಯನ್ನು ಈಡೇರಿಸಿಕೊಳ್ಳಲು ಆರೋಪಿತರಿಗೆ ಹೆದರಿಸುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಮನೆಯವರ ಹತ್ತಿರ ವರದಕ್ಷಿಣೆ ಬೇಡಿಕೆ ಇಟ್ಟಿಲ್ಲ ಎಂದರೆ ಸರಿಯಲ್ಲ. ಅಕ್ರಮ ಸಂಬಂಧ ಇದೆ ಎಂದು ಕಟ್ಟುಕತೆ ಕಟ್ಟಿದ್ದೇನೆ ಎಂದರೆ ಸರಿಯಲ್ಲ. ಒಂದು ಸುಳ್ಳು ಪಿರ್ಯಾದಿ ನೀಡಿದ್ದೇನೆ ಎಂದರೆ ಸರಿಯಲ್ಲ. ಮದುವೆಯಾಗಿ ಆರೋಪಿತರ ಮನೆಯಿಂದ 3ನೇ ತಾರೀಖಿನಂದು ಬರುವಾಗ ಎಲ್ಲಾ ಜ್ಯುವೆಲರಿಗಳನ್ನು ನಾನೇ ಹಾಕಿಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ಚಿನ್ನಾಭರಣಗಳನ್ನು ತೆಗೆದುಕೊಂಡು ಬಂದಿದ್ದರು ಸಹ ದುರ್ಲಾಭ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)